# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

ಎಸ್‌ಸಿ ನಂ. 56/2022

ಸಿಡಬ್ಲೂಃ 13 / ಪಿಡಬ್ಲೂಃ 10

ದಿನಾಂಕಃ 23.01.2025

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಮಹಾಂತೇಶ ಚವಾಣ |
| ತಂದೆಯ ಹೆಸರು | : | ಪಾಂಡಪ್ಪ |
| ವಯಸ್ಸು | : | 46 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸ ಸ್ಥಳ | : | ಹತ್ತಿಕಟ್ಟಿ ತಾಂಡಾ |

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ

1. ಪ್ರಾಸಾ-1 ಮತ್ತು 5 ರವರು ನನಗೆ ಗೊತ್ತು. ಚಾಸಾ-10, 11, 12, ಪ್ರಾಸಾ-6 ಮತ್ತು 8, ರವರು ನನಗೆ ಗೊತ್ತು. ಮೃತ ಸೋಮಲೆಪ್ಪ ನಾಯಕ ಇವರ ಪರಿಚಯ ನನಗೆ ಇತ್ತು. ಮೃತ ಸೋಮಲೆಪ್ಪ ನಾಯಕ ಹತ್ತಿಕಟ್ಟಿ ತಾಂಡಾದಲ್ಲಿ ಇರುತ್ತಿದ್ದು, ಅವರು ತಾಂಡಾದ ಯಜಮಾನರಾಗಿದ್ದರು.

2. ನ್ಯಾಯಾಲಯದ ವಿ.ಸಿ.ಯಲ್ಲಿ ಕಾಣಿಸುವ ಆರೋಪಿ ನನಗೆ ಪರಿಚಯ ಇರುತ್ತಾನೆ. ಆರೋಪಿಗೆ ಮದುವೆಯಾಗಿರುತ್ತದೆ. ಆತನಿಗೆ ಮೂರು ಜನ ಹೆಣ್ಣುಮಕ್ಕಳು ಹಾಗೂ ಇಬ್ಬರು ಗಂಡು ಮಕ್ಕಳು ಇರುತ್ತಾರೆ.

3. ಆರೋಪಿಗೂ ಮತ್ತು ಆತನ ಹೆಂಡತಿಗೂ ಮಧ್ಯ ಜಗಳ ಇತ್ತು. ಈ ಕಾರಣಕ್ಕಾಗಿ ಆರೋಪಿಯ ಹೆಂಡತಿಯು ತನ್ನ ತವರು ಮನೆಗೆ ಹೋಗಿ ವಾಸವಾಗಿದ್ದಳು. ಆದ್ದರಿಂದ ಆರೋಪಿಯು ತನ್ನ ಸಂಸಾರವನ್ನು ಸರಿ ಮಾಡಿಕೊಡು ಎಂದು ಮೃತ ಸೋಮಲೆಪ್ಪ ನಾಯಕ ಇವರನ್ನು ಕೇಳುತ್ತಿದ್ದರು. ಆಗ ನಾನು, ಚಾಸಾ-10 ರಿಂದ 12 ಹಾಗೂ ಮೃತ ಸೋಮಲೆಪ್ಪ ನಾಯಕ ನಾವೆಲ್ಲಾ ಸೇರಿ ಆರೋಪಿಯ ಸಂಸಾರವನ್ನು ಸರಿ ಮಾಡಲು ಆರೋಪಿಯ ಹೆಂಡತಿಯ ತವರೂರಾದ ಚಂದಾಪುರ ಗ್ರಾಮಕ್ಕೆ ಹೋಗಿ ಪ್ರಯತ್ನ ಮಾಡಿದ್ದೆವು. ಆದರೂ ಕೂಡಾ ಆರೋಪಿಯ ಸಂಸಾರ ಸರಿ ಹೋಗಿರಲಿಲ್ಲ. ಈ ಕಾರಣಕ್ಕಾಗಿ ಆರೋಪಿಯು ಸದರಿ ಸೋಮಲೆಪ್ಪ ನಾಯಕ ಇವರ ಮೇಲೆ ಸಿಟ್ಟು ಇಟ್ಟುಕೊಂಡಿದ್ದನು ಹಾಗೂ ಹಾಗೆಯೇ ಮೃತ ಸೋಮಲೆಪ್ಪ ನಾಯಕನಿಗೆ ಹೊಡೆ ಬಡೆ ಮಾಡುವುದಾಗಿ

ಹೇಳುತ್ತಿದ್ದನು.

4. ದಿಃ 04.03.2022 ರಂದು ರಾತ್ರಿ 08.00 ಗಂಟೆ ಸುಮಾರಿಗೆ ನಾನು, ಮೃತ ಸೋಮಲೆಪ್ಪ ನಾಯಕ, ಚಾಸಾ-10 ರಿಂದ 12 ರವರು ಸೇವಾಲಾಲ ದೇವಸ್ಥಾನದಲ್ಲಿ ಅದರ ಉದ್ಘಾಟನೆಗೆ ಸಂಬಂಧಿಸಿದಂತೆ ಸೇರಿದ್ದಾಗ, ಅಲ್ಲಿಗೆ ಆರೋಪಿಯು ಕೈಯಲ್ಲಿ ಚಪ್ಪಲಿ ಹಿಡಿದುಕೊಂಡು ಬಂದು, ಮೃತ ಸೋಮಲೆಪ್ಪ ನಾಯಕನಿಗೆ ಏ ನಾಯಕ ನನ್ನ ಸಂಸಾರವನ್ನು ನೀನು ಸರಿ ಮಾಡಿಲ್ಲ, ಹೊರಗೆ ಬಾ ನಿನಗೆ ಚಪ್ಪಲಿಯಿಂದ ಹೊಡೆಯುತ್ತೇನೆ ಎಂದು ಹೇಳಿರುತ್ತಾನೆ. ಆಗ ಸೇರಿದ್ದ ನಾವೆಲ್ಲರೂ ಆರೋಪಿಗೆ ಸರಿಯಾಗಿ ಮಾತನಾಡಬೇಕೆಂದು ಹೇಳಿರುತ್ತೇವೆ.

5. ನಂತರ ಆರೋಪಿಯು ಚಪ್ಪಲಿಯನ್ನು ಹೊರಗೆ ಒಗೆದು, ದೇವಸ್ಥಾನದ ಒಳಗಡೆ ಬಂದಿದ್ದು, ಆಗ ನಾವು ಆತನನ್ನು ತಡೆಯಲು ಪ್ರಯತ್ನಿಸಿದರೂ ಕೂಡಾ, ಆತನು ದೇವಸ್ಥಾನದ ಕಂಬದ ಹತ್ತಿರ ಕುಳಿತಿದ್ದ ಸೋಮಲೆಪ್ಪ ನಾಯಕನಿಗೆ ಕಾಲಿನಿಂದ ಒದ್ದಿರುತ್ತಾನೆ ಮತ್ತು ಸೋಮಲೆಪ್ಪನ ಶರ್ಟನ್ನು ಹಿಡಿದು ಜಗ್ಗಿರುತ್ತಾನೆ ಮತ್ತು ತನ್ನ ಹತ್ತಿರ ಇದ್ದ ಚಾಕುವಿನಿಂದ ಸೋಮಲೆಪ್ಪನ ಗದ್ದಕ್ಕೆ, ಹೊಟ್ಟೆಗೆ, ಕೈಗೆ, ಕುತ್ತಿಗೆಗೆ ಚುಚ್ಚಿದ್ದರಿಂದಾಗಿ ಸೋಮಲೆಪ್ಪನಿಗೆ ಭಾರೀ ರಕ್ತ ಗಾಯವಾಗಿರುತ್ತದೆ ಮತ್ತು ದೇವಸ್ಥಾನದ ತುಂಬೆಲ್ಲಾ ರಕ್ತವಾಗಿತ್ತು.

6. ಆರೋಪಿಯ ಬೆನ್ನಿನ ಹಿಂದೆ ಇನ್ನೊಂದು ಚೂರಿ ಇದ್ದು, ಅದನ್ನು ನಾನು ಕಸಿದುಕೊಂಡಿರುತ್ತೇನೆ. ನಂತರ ಆರೋಪಿಯು ಚುಚ್ಚಿದ ಚಾಕುವನ್ನು ತೆಗೆದುಕೊಂಡು ಅಲ್ಲಿಂದ ಹೊರಟು ಹೋಗಿರುತ್ತಾನೆ.

7. ಈ ವಿಷಯ ತಿಳಿದ ನಂತರ ಪ್ರಾಸಾ-1, 5 ಮತ್ತು 6 ರವರು ಸ್ಥಳಕ್ಕೆ ಬಂದಿರುತ್ತಾರೆ. ನಾನು ಹಾಗೂ ಚಾಸಾ-10 ರವರು ನಡೆದ ವಿಷಯವನ್ನು ಪ್ರಾಸಾ-1 ರವರಿಗೆ ತಿಳಿಸಿರುತ್ತೇವೆ. ಹಾಗೆಯೇ ಪ್ರಾಸಾ-5 ಮತ್ತು 6 ರವರಿಗೂ ಕೂಡಾ ವಿಷಯವನ್ನು ತಿಳಿಸಿರುತ್ತೇವೆ.

8. ನಂತರ ಪ್ರಾಸಾ-1 ಮತ್ತು 5 ರವರು ಪ್ರಾಸಾ-6 ರವರ ವಾಹನದಲ್ಲಿ ಸೋಮಲೆಪ್ಪ ನಾಯಕ ಇವರನ್ನು ಗದಗನ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ವೈದ್ಯರು ಸೋಮಲೆಪ್ಪ ನಾಯಕ ಮೃತಪಟ್ಟಿರುತ್ತಾರೆ ಎಂದು ಹೇಳಿರುತ್ತಾರೆ. ಆಗ ಸಮಯ ರಾತ್ರಿ 09.45 ಗಂಟೆಯಾಗಿತ್ತು.

9. ನಂತರ ಪ್ರಾಸಾ-1 ರವರು ಪೋಲೀಸರಿಗೆ ದೂರನ್ನು ಕೊಟ್ಟಿರುತ್ತಾರೆ. ಸದರಿ ದೂರನ್ನು ಪ್ರಾಸಾ-1 ರವರು ಹೇಳಿದಂತೆ ನಾನು ಬರೆದಿರುತ್ತೇನೆ. ಈಗ ಸದರಿ ದೂರನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, **ಸಾಕ್ಷಿಯ ಎರಡು ದಸ್ತೂರ ಸಹಿಗಳನ್ನು ಒಟ್ಟಾಗಿ**

**ನಿಪಿ-1(ಎ) ಎಂದು ಗುರುತಿಸಲಾಯಿತು.** ಪ್ರಾಸಾ-1 ರವರು ನಿಪಿ-1 ಕ್ಕೆ ತಮ್ಮ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ. ಪ್ರಾಸಾ-1 ರವರು ದೂರನ್ನು ಕೊಟ್ಟಾಗ, ಸಮಯ ಬೆಳಗಿನ ಜಾವ 01.30 ಗಂಟೆಯಾಗಿತ್ತು.

10. ಆರೋಪಿಯಿಂದ ಕಸಿದುಕೊಂಡ ಇನ್ನೊಂದು ಚೂರಿಯನ್ನು ನಾನು ನಮ್ಮ ಮನೆಯಲ್ಲಿ ಇಟ್ಟಿದ್ದೆನು. ದಿಃ 06.03.2022 ರಂದು ನಾನು ಮುಂಡರಗಿ ಪೋಲೀಸ ಠಾಣೆಗೆ ಹೋಗಿ ಸದರಿ ಚೂರಿಯನ್ನು ಹಾಜರಪಡಿಸಿರುತ್ತೇನೆ. ಆಗ ಪೋಲೀಸರು ಸದರಿ ಚೂರಿಯನ್ನು ಚಾಸಾ-8 ಮತ್ತು ಪ್ರಾಸಾ-5 ರವರ ಸಮಕ್ಷಮ ಬೆಳಿಗ್ಗೆ 08.30 ರಿಂದ 09.15 ರ ವರೆಗೆ ಪಂಚನಾಮೆ ಮೂಲಕ ಅಮಾನತ್ತು ಪಡಿಸಿಕೊಂಡಿರುತ್ತಾರೆ. ಈಗ ಸದರಿ ಪಂಚನಾಮೆಯನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-16 ಎಂದು ಗುರುತಿಸಲಾಗಿದ್ದು, **ಸಾಕ್ಷಿಯ ಸಹಿಯನ್ನು ನಿಪಿ-16(ಬಿ) ಎಂದು ಗುರುತಿಸಲಾಯಿತು.** ಆ ಸಮಯದಲ್ಲಿ ನಿಪಿ-17 ರಂತೆ ಫೋಟೋವನ್ನು ತೆಗೆಯಲಾಗಿರುತ್ತದೆ. ಸದರಿ ಚೂರಿಯನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿರುತ್ತದೆ.

11. ಆರೋಪಿಯು ಮೃತ ಸೋಮಲೆಪ್ಪ ನಾಯಕನಿಗೆ ಚುಚ್ಚಲು ಉಪಯೋಗಿಸಿದ ಚಾಕುವನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ಮು.ಮಾ.6 ಎಂದು ಗುರುತಿಸಲಾಗಿರುತ್ತದೆ.

12. ಘಟನೆಯ ಸಮಯದಲ್ಲಿ ಆರೋಪಿಯು ಧರಿಸಿದ್ದ ಫುಲ ತೋಳಿನ ಶರ್ಟನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ಮು.ಮಾ.8 ಎಂದು ಗುರುತಿಸಲಾಗಿರುತ್ತದೆ.

13. ಘಟನೆಯ ಸಮಯದಲ್ಲಿ ಮೃತ ಸೋಮಲೆಪ್ಪ ನಾಯಕನು ಧರಿಸಿದ್ದ ಬನಿಯನ, ಚಡ್ಡಿ ಮತ್ತು ಲುಂಗಿಯನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಈಗಾಗಲೇ ಮು.ಮಾ.2 ರಿಂದ 4 ಎಂದು ಕ್ರಮವಾಗಿ ಗುರುತಿಸಲಾಗಿರುತ್ತದೆ.

14. ಈಗ ತೋರಿಸಿದ ನಿಪಿ-2 ಮತ್ತು 3 ರಲ್ಲಿ ದೇವಸ್ಥಾನದ ಭಾವಚಿತ್ರಗಳು ಇರುತ್ತವೆ. ನಿಪಿ-3 ರಲ್ಲಿ ಗುನ್ನಾ ಸ್ಥಳದ ಭಾವಚಿತ್ರ ಇರುತ್ತದೆ. ಪೋಲೀಸರು ನನ್ನನ್ನು ವಿಚಾರಿಸಿ ನನ್ನ ಹೇಳಿಕೆಯನ್ನು ಬರೆದುಕೊಂಡಿರುತ್ತಾರೆ.

15. ದಿಃ **17.03.2022 ರಂದು, ನಾನು ಮುಂಡರಗಿ ನ್ಯಾಯಾಲಯದ ನ್ಯಾಯಾಧೀಶರ**

**ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಈಗ ಸದರಿ ಹೇಳಿಕೆಯನ್ನು ನೋಡುತ್ತಿದ್ದು, ಅದನ್ನು ನಿಪಿ-19 ಎಂದು, ಸಾಕ್ಷಿಯ ಎರಡು ಸಹಿಗಳನ್ನು ಒಟ್ಟಾಗಿ ನಿಪಿ-19(ಎ) ಎಂದು ಗುರುತಿಸಲಾಯಿತು.**

16. ಮೃತ ಸೋಮಲೆಪ್ಪ ನಾಯಕನು ತನ್ನ ಸಂಸಾರವನ್ನು ಸರಿಪಡಿಸಲಿಲ್ಲ ಎಂಬ ದ್ವೇಷವನ್ನು ಇಟ್ಟುಕೊಂಡು, ಆರೋಪಿ ಆತನನ್ನು ಕೊಲೆ ಮಾಡಿರುತ್ತಾನೆ. ಹಾಗೆಯೇ ಸೋಮಲೆಪ್ಪ ನಾಯಕನನ್ನು ಯಾವುದಾದರೂ ಕಾರ್ಯಕ್ರಮಗಳಲ್ಲಿ ನೋಡಿದಾಗ, ತನ್ನ ಸಂಸಾರವನ್ನು ಸರಿ ಮಾಡದೇ ಇದ್ದುದರಿಂದ ಹೊಡೆಯುವುದಾಗಿ ಆರೋಪಿಯು ಹೇಳುತ್ತಿದ್ದನು.

**ಪಾಟಿ ಸವಾಲುಃ ಶ್ರೀ ಎಂ.ಕೆ. ಚವಡಿ, ಆರೋಪಿ ಪರ ವಕೀಲರಿಂದಃ**

**(ಈ ದಿನ, ಶ್ರೀ ಎಂ.ಕೆ. ಚವಡಿ ವಕೀಲರು ನಿವೃತ್ತಿ ಮೆಮೋವನ್ನು ಸಲ್ಲಿಸಿದ್ದು, ಅದನ್ನು ಪುರಸ್ಕರಿಸಲಾಗಿರುತ್ತದೆ. ಆರೋಪಿಯು ವಕೀಲರನ್ನು ನೇಮಿಸಿಕೊಳ್ಳುವುದಾಗಿ ಪಾಟಿ ಸವಾಲಿಗೆ ಸಮಯವನ್ನು ಕೋರಿರುತ್ತಾರೆ. ಆದ್ದರಿಂದ ಪಾಟಿ ಸವಾಲನ್ನು ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಗದಗ**